ಹಣ ಕೂಡ ಜಮಾ ಆಗುತ್ತಿಲ್ಲ. 70, 80 ಲಕ್ಷ ವಸೂಲಾಗುತ್ತಿದ್ದ ಹಣ ಇವತ್ತು 20, 30 ಲಕ್ಷ ಕಡಿಮೆಯಾಗುವ ಸ್ಥಿತಿಗೆ ಬಂದಿದೆ. ಇದೇನಾದರೂ ಸರಿಯಾದರೆ ರೈತರಿಗೆ ಇನ್ನೂ 100-200 ರೂಪಾಯಿಗಳವರೆಗೆ ಜಾಸ್ತಿಯಾಗುವುದರಲ್ಲಿ ಅನುಮಾನವಿಲ್ಲ. ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೇಳುವುದೇನೆಂದರೆ, ಬೇಕಾದರೆ ನಾನು ಬಂದು ತಮಗೆ ಬರೆದುಕೊಡುತ್ತೇನೆ, ಅಂಥ ಕಡೆ ಸ್ವಲ್ಪ ಸ್ಕ್ವಾಡ್ ಹಾಕಿ ಏನಾದರೂ ನಂ (2)ನಲ್ಲಿ ಹೋಗುವ ಕೊಬ್ಬರಿಯನ್ನು ಸ್ವಲ್ಪ ತಹಬಂದಿಗೆ ತಂದು ನಿಜವಾಗಿ ಟ್ಯಾಕ್ಸ್ ಕಟ್ಟಿ ವ್ಯಾಪಾರ ಮಾಡುವ ವರ್ತಕರು ಮತ್ತು ರೈತರಿಬ್ಬರ ರಕ್ಷಣೆಯನ್ನು ಮಾಡಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಸದಸ್ಯರು ನಂ(2)ರಲ್ಲಿ ಹೋಗುತ್ತಿರುವ ಕೊಬ್ಬರಿ ತೆರಿಗೆ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಅವರು ಹೇಳಿದಂತೆ ಈಗಾಗಲೇ ಸ್ಕ್ವಾಡ್ ಹಾಕಲಿಕ್ಕೆ ನಾನು ಸೂಚಿಸಿದ್ದೇನೆ. ಅದನ್ನು ಬಿಗಿ ಮಾಡಲಿಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇನೆ. ಇದು ಬಹಳ ದಿನಗಳಿಂದ ನಡೆಯುತ್ತಿದೆ. ಬಹಳಷ್ಟು ಕೊಬ್ಬರಿ ವ್ಯಾಪಾರದಲ್ಲಿ ತೆರಿಗೆ ಕಳ್ಳತನವಾಗುತ್ತಿರತಕ್ಕದ್ದನ್ನು ನಾವು ಅನೇಕ ಸಾರಿ ಚರ್ಚೆ ಮಾಡಿದ್ದೇವೆ. ಎಷ್ಟು ಸಾಧ್ಯವೋ ಅಷ್ಟು ಬಿಗಿ ಮಾಡುತ್ತೇನೆ.

(ಊ) ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಶಿಕ್ಷಕರಿಗೆ ಅನ್ಯಾಯ.

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ): ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲ್‌ನಲ್ಲಿ, ಶಿಕ್ಷಕರಿಗೆ ಅನ್ಯಾಯವಾಗಿದ್ದರ ಬಗ್ಗೆ ರಾಜ್ಯ ಸರ್ಕಾರಕ್ಕೆ ತಪ್ಪು ಕಲ್ಪನೆ ಕೊಟ್ಟಿದ್ದ ಕಮಿಷನರ್‌ರವರ ಬಾಬ್ತು ವಿವರಣೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಅವರು ಹೇಳುವಂಥ ವಿಚಾರ ಮೇಲ್ಮನೆಯಲ್ಲಿ ಕೂಡ ಚರ್ಚೆಗೆ ಬಂದಿತ್ತು.

ಅಧ್ಯಕ್ಷರು: ನಾಳೆ ಸದನ ಮುಗಿಯುದರೊಳಗೆ, ಇವತ್ತು ಸಂಜೆ ಅಥವಾ ನಾಳೆಯೊಳಗೆ ಮಾಹಿತಿ ತರಿಸಿಕೊಡಿ.

(ಎ) ರಾಜ್ಯದಲ್ಲಿ ಒಂದಂಕಿ ಲಾಟರಿ ಹಾಗೂ ಮಟ್ಕಾ ಹಾವಳಿ.

+ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಒಂದಂಕಿ ಲಾಟರಿ ಮತ್ತು ಮಟ್ಕಾ ನಡೆಯತಕ್ಕದ್ದು ತಮಗೆಲ್ಲಾ ಗೊತ್ತಿದೆ. ಯಾವ ಕ್ಷೇತ್ರವೂ ಅದಕ್ಕೆ ಹೊರತಾಗಿಲ್ಲ. ಆದರೆ, ಅದನ್ನು ನಿಲ್ಲಿಸುವಂಥ ಪ್ರಾಮಾಣಿಕ ಪ್ರಯತ್ನ ಸಹ ನಮ್ಮ ಪೊಲೀಸ್ ಇಲಾಖೆಯಿಂದ ಆಗುತ್ತಿಲ್ಲ. ಅದಕ್ಕೆ ತಾವು ಬೇರೆ ಬೇರೆ ಸಂದರ್ಭಗಳಲ್ಲಿ, ಕಾನೂನಿನ ನೆರವನ್ನು ಅಥವಾ ತಾಂತ್ರಿಕ ಕಾರಣಗಳನ್ನೋ ಕೊಡುತ್ತಿದ್ದೀರಿ. ಈ ಮಟ್ಕಾ ಏಕೆ ನಡೆಯುತ್ತಿದೆ? ಇದನ್ನು ನಿಲ್ಲಿಸಲಿಕ್ಕೆ ಏಕೆ ಆಗುತ್ತಿಲ್ಲ?